ವಿಷಯ :– ಭಾರತೀಯ ಸಂಗೀತ ನೃತ್ಯ ಕಲಾಶಾಲೆ ಮಡಿಕೇರಿ

ಪ್ರ. 482 (1144) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. 1954–55 ರಲ್ಲಿ ಕೊಡಗು ಸರಕಾರ ಸ್ಥಾಪಿಸಿದ ಶಾಸ್ತ್ರೀಯ ಸಂಗೀತ ನೃತ್ಯದ ಕಲೆಗಳ ಅಭಿವೃದ್ಧಿ ಅಕಾಡಮಿಯು ಇಂದು ಭಾರತೀಯ ಸಂಗೀತ ನೃತ್ಯ ಕಲಾ ಶಾಲಾ ಎಂಬ ಹೆಸರಿನಿಂದ ನಡೆದು ಬರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ, ಈ ಸಂಸ್ಥೆಗೆ ಸರಕಾರದವರಿಂದ ಯಾವುದೇ ನೆರವನ್ನು ನೀಡಲಾಗುತ್ತಿದೆಯೆ ;

ಇ. ಆರ್ಥಿಕ ನೆರವನ್ನು ನೀಡುವುದಾದರೆ ಎಷ್ಟು ಮತ್ತು ಹೇಗೆ ನೀಡಲಾಗುತ್ತಿದೆ ;

ಈ. ಹಾಗಿಲ್ಲದಿದ್ದಲ್ಲಿ ಯಾವ ಕಾರಣಕ್ಕಾಗಿ ;

ಉ. ಈ ಸಂಸ್ಥೆಯು ನೀಡುವ ಸಂಗೀತ ಮತ್ತು ಭರತ ನಾಟ್ಯ ಪಾಠಕ್ಕೆ ಕೊಡಗಿನಲ್ಲಿ ಪರೀಕ್ಷಾ ಕೇಂದ್ರ ಇದೆಯೆ ;

ಊ. ಹಾಗಿಲ್ಲದಿದ್ದಲ್ಲಿ ಎಲ್ಲಿ;

ಋ, ಹಾಗಿಲ್ಲದಿದ್ದಲ್ಲಿ ಈ ವರ್ಷದಲ್ಲಿ ಮಡಿಕೇರಿಯಲ್ಲಿ ತೆರೆಯಲಾಗುವುದೇ ಮತ್ತು ಆ ಬಗ್ಗೆ ಸರಕಾರದಲ್ಲಿ ಬೇಡಿಕೆ ಇದೆಯೇ ;

ೠ. ಈ ಸಂಸ್ಥೆಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಮತ್ತು ಈ ಸಂಸ್ಥೆಯ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿಯೂ ಮತ್ತು ರಾಷ್ಟ್ರ ಮಟ್ಟದಲ್ಲಿಯೂ ಸಂಗೀತ ನೃತ್ಯಗಳಲ್ಲಿ ಭಾಗವಹಿಸಿದ ಸಂದರ್ಭಗಳು ಇದೆಯೆ ; ಹಾಗಿದ್ದಲ್ಲಿ ಯಾವಾಗ ಎಲ್ಲೆಲ್ಲಿ ಮತ್ತು ಯಾರ್ಯಾರು ಎಂಬ ವಿವರಗಳನ್ನು ಕೊಡಲಾಗುವುದೇ ?

ಶ್ರೀ ಬಿ. ರಾಚಯ್ಯ (ವಿದ್ಯಾ ಸಚಿವರು):—

ಅ. ಅಂತಹ ಯಾವ ಸಂಸ್ಥೆಯು ಇಲಾಖೆಯಲ್ಲಿ ನೊಂದಾಣಿಕೆಯನ್ನು ಹಾಗೂ ಅಂಗೀಕಾರವನ್ನು ಪಡೆದಿರುವುದಿಲ್ಲ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ಉ ಮತ್ತು ಊ.

ಸಾಕಷ್ಟು ಸಂಗೀತ ಮತ್ತು ನೃತ್ಯ ಶಿಕ್ಷಣದ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರುವುದಾದರೆ ಅಂತಹ ಸಂದರ್ಭದಲ್ಲಿ ಕರ್ನಾಟಕ ಪರೀಕ್ಷಾ ಮಂಡಳಿಯು ಕೊಡಗಿನಲ್ಲಿ ಪರೀಕ್ಷಾ ಕೇಂದ್ರವನ್ನು ನಡೆಸುತ್ತಾರೆ.

ಋ ಮತ್ತು ೠ.

ಮೇಲಿನ ಉತ್ತರದಿಂದ ಪ್ರಶ್ನೆ

ಉದ್ಭವಿಸುವುದಿಲ್ಲ.

ವಿಷಯ :– ಅಳತೆ ಲೋಕಸೇವಾ ವೃಂದ

ಪ್ರ. 483 (1266) ಶ್ರೀ ಎಂ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಅಳಿಕೆ ಗ್ರಾಮದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿಗಾಗಿ ಮಾಡಿದ ''ಗ್ರಾಮಾಂತರ'' ನಳದ ನೀರಿನ ಯೋಜನೆಯ ನೀರನ್ನು ಅಳಿಕೆ ಲೋಕ ಸೇವಾ ವೃಂದದವರು ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ. ಅಳಿಕೆ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು 1978ರಲ್ಲಿ ಪೂರ್ತಿಗೊಳಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ವಹಿಸಿಕೊಡಲಾಯಿತು. ಈ ಪಂಚಾಯತಿಯಿಂದ ಸಾರ್ವಜನಿಕರಿಗೂ ಹಾಗೂ ಅಳಿಕೆ ಲೋಕ ಸೇವ ವೃಂದದವರು ನಡೆಸುತ್ತಿರುವ ಸಂಸ್ಥೆಗಳಿಗೂ ನೀರನ್ನು ಪೂರೈಸಲಾಗುತ್ತಿದೆ.

ಆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಪ್ರತಿ ವ್ಯಕ್ತಿಗೆ 50 ಎಲ್‌ಪಿಸಿಡಿ ನೀರು ಒದಗಿಸುವ ಕಾರ್ಯಕ್ರಮವಿರುವುದರಿಂದ ಈಗಿನ ಜನಸಂಖ್ಯೆಗೆ ಸಾಕಷ್ಟು ನೀರು ಪೂರೈಸುವ ಉದ್ದೇಶದಿಂದ ಈ ಗ್ರಾಮಕ್ಕೆ ಅಭಿವೃದ್ಧಿ ನೀರು ಸರಬರಾಜು ಯೋಜನೆಯನ್ನು 1982—83ರಲ್ಲಿ ಸರ್ಕಾರವು ಮಂಜೂರು ಮಾಡಿರುತ್ತದೆ. ಅವಶ್ಯಕತೆ ಮತ್ತು ಆನುಭಾವಗಳ ಲಭ್ಯಗಳನ್ನು ಅವಲಂಬಿಸಿ ಮುಂಬರುವ ಯೋಜನೆಗಳಲ್ಲಿ ಈ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಚಿಸಲಾಗುತ್ತಿದೆ.

ವಿಷಯ :— ಹಳೆ ಮೈಸೂರು ರಾಜ್ಯ ಹಾಗೂ ಬಾಂಬೆ ಕರ್ನಾಟಕದಲ್ಲಿರುವ ಸರಕಾರಿ ಕಾಲೇಜುಗಳು

ಪ್ರ. 845(1396) ಡಾ॥ ಹೆಗ್ಗಪ್ಪ (ಬ್ಯಾಡಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಹಳೇ ಮೈಸೂರು ರಾಜ್ಯದಲ್ಲಿರುವ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ;

ಆ. ಬಾಂಬೆ ಕರ್ನಾಟಕದಲ್ಲಿರುವ ಸರಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ;

ಇ. ಈ ತಾರತಮ್ಯಕ್ಕೆ ಕಾರಣಗಳೇನಾದರೂ ಇವೆಯೇ ;

ಈ ಈ ತಾರತಮ್ಯವನ್ನು ಹೋಗಲಾಡಿಸಲು ಬಾಂಬೆ ಕರ್ನಾಟಕದಲ್ಲಿ ಸರಕಾರಿ ಕಾಲೇಜುಗಳನ್ನು ಸ್ಥಾಪಿಸಲಾಗುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :—

ಅ. 29

ಆ. 3

ಇ. ಈ ಪ್ರದೇಶದಲ್ಲಿ ಮೊದಲಿನಿಂದಲೂ ಖಾಸಗೀ ಸಂಸ್ಥೆಗಳು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತ ಬಂದಿರುವುದರಿಂದ ಖಾಸಗೀ ಕಾಲೇಜುಗಳು ಹೆಚ್ಚಾಗಿವೆ.

ಈ. ಹೌದು. ಅಗತ್ಯವಿದ್ದೆಡೆ ಕೊಡುವುದನ್ನು ಪರಿಶೀಲಿಸಲಾಗುವುದು 1983-84ರಲ್ಲಿ ಹಳಿಯಾಳದಲ್ಲಿ ಒಂದು ಸರ್ಕಾರಿ ಕಾಲೇಜು ಪ್ರಾರಂಭವಾಗಿದೆ. 1984-85ರಲ್ಲಿ ಸವಣೂರ ಮತ್ತು ಮುಂಡಗೋಡು ಈ ಸ್ಥಳಗಳಲ್ಲಿ ಎರಡು ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ವಿಷಯ :— ರಾಜ್ಯದಲ್ಲಿ ನೀರು ಪೂರೈಸಲು ಕೊಟ್ಟ ವಾಹನದ ಬಾಡಿಗೆ ಹಣ

ಪ್ರ. 487(1488) ಶ್ರೀ ಬಿ.ಜೆ. ಬಣಕಾರ್ (ಹಿರೇಕೆರೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ರಾಜ್ಯದಲ್ಲಿ 1981-82, 1982-83 ಮತ್ತು 1983-84ನೇ ಸಾಲಿನಲ್ಲಿ ಸಾಲುಗಳಲ್ಲಿ ನೀರಿನ ಬರಗಾಲದಲ್ಲಿ ಕುಡಿಯುವ ನೀರನ್ನು ಒದಗಿಸಲು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡಿರುವ ವಾಹನಗಳಿಗೆ ಕೊಟ್ಟಿರುವ ಬಾಡಿಗೆ ಹಣವೆಷ್ಟು ; (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು) ;

ಆ. ಈ ಸಾಲುಗಳಲ್ಲಿ ಎಷ್ಟು ಹಳ್ಳಿಗಳಿಗೆ ವಾಹನಗಳ ಮುಖಾಂತರ ಕುಡಿಯುವ ನೀರನ್ನು ಪೂರೈಸಲಾಗಿದೆ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;